ದಿನಾಂಕಃ 20-01-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲು ಃ ವಾದಿ ಪರ ವಕೀಲರಿಂದ</u>

ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. ನನ್ನ ಮದುವೆ 2014 ನೇ ಸಾಲಿನಲ್ಲಿ ಆಗಿರುತ್ತದೆ. ನನಗೆ ಎರಡು ಜನ ಮಕ್ಕಳು. ನನ್ನ ಹೆಂಡತಿ ಹೆಸರು ರೋಶನಬಿ. ನಾನು ಒಂದು ಬಾರಿ ಕೌನ್ಸಿಲರ್ ಆಗಿದ್ದೆ.

1992-93 ರಲ್ಲಿ ನನಗೆ ಅಂದಾಜು 12 ವರ್ಷ ವಯಸ್ಸು ಇತ್ತು. ವಾದಿಯ ಮೇಲೆ ನನ್ನ ಹೆಂಡತಿ ಒಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಅದು ಭಾಗದ ವಿಚಾರವಾಗಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ ಅಲ್ಲ.

ವಾದಿಯು 1987 ರಲ್ಲಿ ಟಿಸಿಎಚ್ ಪದವಿ ಪಡೆದಿದ್ದಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು 1988 ರಲ್ಲಿ ಇಂಟರ್ ಶಿಪ್ ಆಗಿದೆ ಎಂದು ನುಡಿಯುತ್ತಾರೆ. ಆಗ ಇಂಟರಶಿಪ್ ಆದವರಿಗೆ ಶಿಕ್ಷಕ ಹುದ್ದೆ ಕೊಡುತ್ತಿದ್ದರು ಎಂದರೆ ಸರಿ ಅಲ್ಲ. ಬಿ.ಎ. ಪದವಿ ಓದಿದವರಿಗೆ ಕೊಡುತ್ತಿದ್ದರು. ವಾದಿಯು ಸೇವೆಗೆ ಸೇರುವ ಮುಂಚೆ ಮನೆ ಪಾಠ ಹೇಳಿಕೊಡುತ್ತಿದ್ದರು ಮತ್ತು ದರ್ಜಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ ಅಲ್ಲ. ಆಗ ನನಗೆ ಕೇವಲ 6-7 ವರ್ಷ ವಯಸ್ಸು ಇದುದ್ದರಿಂದ ನನಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ ಅಲ್ಲ. ಯಾವುದೇ ವಿಷಯ ನೆನಪಿರಬೇಕಾದರೆ ದೊಡ್ಡವರಾದ ನಂತರ ಗೊತ್ತಾಗುತ್ತದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಸ್ವತ್ತಿನ ಖರೀದಿ ಯಾವಾಗ ಆಯಿತು ಮತ್ತು ಖರೀದಿ ಪತ್ರದ ವಿವರ ಬರೆಸಿದ್ದೇನೆ . ಸಾಕ್ಷಿ ಮುಂದುವರೆದು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಖರೀದಿ ಹಣ ರೂ.8000/- ಒಂದೇ ಬಾರಿಗೆ ನೀಡಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ಒಂದುವೇಳೆ ಮುಂಚಿತವಾಗಿ ಕ್ರಯದ ಕರಾರು ಆಗಿದ್ದರೆ ಕರಾರಿನ ಸಂದರ್ಭದಲ್ಲಿ ಎಷ್ಟು ಹಣ ಕೊಟ್ಟಿದ್ದರು ಮತ್ತು ಕ್ರಯದ ಸಂದರ್ಭದಲ್ಲಿ ಎಷ್ಟು ಹಣ ಕೊಡಬೇಕು ಎಂದು ಬರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಂಚೆ ಯಾವುದೇ ಕ್ರಯದ ಕರಾರು ಪತ್ರ ಆಗಿರಲಿಲ್ಲ, ಈಗ ಸೃಷ್ಟಿಸಿಕೊಂಡು ಹಾಜರಪಡಿಸಿದ್ದೇವೆ ಎಂದರೆ ಸರಿ ಅಲ್ಲ.

ನಮ್ಮ ತಂದೆ ಪ್ರತಿದಿನ 5 ಬಾರಿ ನಮಾಜ ಮಾಡುತ್ತಾರೆ ಎಂದರೆ ಸರಿ. ಅವರು ಸಿಂಧನೂರಿನ ಪಿಡಬ್ಲ್ಯೂಡಿ ಕ್ಯಾಂಪಿನಲ್ಲಿರುವ ಮಸೀದಿಯಲ್ಲಿ ನಮಾಜ ಮಾಡುತ್ತಾರೆ ಎಂದರೆ ಸರಿ. ನಮ್ಮ ತಂದೆ ಅವರ ವೈಯಕ್ತಿಕ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಾರೆ ಎಂದರೆ, ಈಗ ಆಗುತ್ತಿಲ್ಲ. ಅವರು ನ್ಯಾಯಾಲಯಕ್ಕೆ ಸಾಕಷ್ಟು ಬಾರಿ ಬಂದು ಹೋಗಿದ್ದಾರೆ ಎಂದರೆ, 2 ವರ್ಷ ಮುಂಚೆ ಬಂದು ಹೋಗಿದ್ದಾರೆ. ನಮ್ಮ ತಂದೆ ತಾಯಿ ಬೇರೆ ಮನೆಯಲ್ಲಿದ್ದಾರೆ ಎಂದರೆ ಸರಿ ಅಲ್ಲ. ನಮ್ಮ ಜೊತೆ ಇದ್ದಾರೆ. ನಮ್ಮ ತಂದೆ ತಾಯಿ ಬೇರೆ ಮನೆಯಲ್ಲಿ ಇದ್ದಾರೆ, ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಮತ್ತು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ ಅಲ್ಲ.

ಲಿಂಗಸಗೂರಿನ ಹಿರಿಯ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಆ ದಾವೆಯಲ್ಲಿ ನನಗೆ ಮತ್ತು ನನ್ನ ಅಕ್ಕ ತಂಗಿಯರಿಗೆ ದಾವಾ ಸ್ವತ್ತಿನಲ್ಲಿ ಭಾಗ ಬರುತ್ತದೆ ಎಂದು ನನ್ನ ತಂದೆ ವಿರುದ್ಧ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸಾಕ್ಷಿಯು ನಿಪಿ-5 ನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಆ ದಾವೆಯನ್ನು ನಾವು ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡಿದ್ದೇವೆ ಎಂದು ಹೇಳಿ ನಾಟ್ ಪ್ರೆಸ್ ಮಾಡಿಕೊಂಡೆವು ಎಂದರೆ ಸರಿ.

ದಾವಾ ಸ್ವತ್ತಿನ ಮೇಲೆ ನಮ್ಮ ಅಣ್ಣ ಕೆಎಫ್ಎಫ್ ಸಿ ಯಲ್ಲಿ ಸಾಲ ಪಡೆದಿದ್ದ ಎಂದರೆ ಸರಿ. ಲಿಂಗಸಗೂರು ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯನ್ನು ಹಿಂದೆ ತೆಗೆದುಕೊಳ್ಳುವಾಗ ಮತ್ತು ಸಾಲ ಮುರುಪಾವತಿ ಮಾಡುವಾಗ ನನ್ನ ಸಹೋದರಿಯರು ಸ್ವಲ್ಪ ಸ್ವಲ್ಪ ಹಣ ನೀಡಿದ್ದರು ಎಂದರೆ ಸರಿ ಅಲ್ಲ. ಆಗ ನಾನು ಚಿಕ್ಕವನಿದ್ದೆ, ಸಾಲ ತೀರಿಸಲು ನನ್ನ ಅಕ್ಕ ತಂಗಿಯರು ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದರಿಂದ ಆಗ ಭಾಗ ಕೊಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿ ಅಲ್ಲ. ಆನಂತರ ನನ್ನ ಅಕ್ಕ ತಂಗಿಯರಿಗೆ ಭಾಗ ಕೊಡದೇ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ, ಸಾಕ್ಷಿಯು ನಮ್ಮ ಅಕ್ಕ ತಂಗಿಯರಿಗೆ ತಲಾ ರೂ. 3,00,000/- ಹಣ ಕೊಟ್ಟು ನನಗೆ ದಾವಾ ಸ್ವತ್ತಿನಲ್ಲಿ ಅರ್ಧ ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಕ್ಕ ತಂಗಿಯರಿಗೆ ತಲಾ ರೂ.3 ಲಕ್ಷ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಅಕ್ಕ ತಂಗಿಯರಿಗೆ ಯಾವುದೇ ಭಾಗ ಕೊಟ್ಟಿಲ್ಲ ಮತ್ತು ಹಣ ನೀಡಿಲ್ಲ, ಹಾಗಾಗಿ ಯಾವುದೇ ದಾಖಲಾತಿ ಹಾಜರಪಡಿಸಿಲ್ಲ ಎಂದರೆ ಸರಿ ಅಲ್ಲ.

ನನ್ನ ಹೆಸರಿಗೆ ದಾನಪತ್ರ ಆಗುವಾಗ ನನ್ನ ಅಕ್ಕ ತಂಗಿಯರು ಮುಂಚಿತವಾಗಿ ತಕರಾರು ಹಾಕಿದ್ದರು ಎಂದರೆ ಸರಿ. ಆನಂತರ ಮುನಿಸಿಪಾಲಟಿಯಲ್ಲಿ ತಕರಾರು ಪ್ರಕರಣ ನಡೆಯಿತು ಎಂದರೆ ಸರಿ. ಈ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಬದ್ಧವಾಗಿ ಮ್ಯೂಟೇಶನ ಮಾಡಿದ್ದಾರೆ ಎಂದರೆ, ಈ ದಾವೆ ಇದೆ ಎಂದು ಮ್ಯೂಟೇಶನ ಮಾಡಿದ್ದಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮ ತಂದೆ ಮನೆ ಮತ್ತು ಅಂಗಡಿ ಕಟ್ಟಿಸಲು ಸಾಲ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವಶ್ಯಕತೆ ಬಿದ್ದರೆ ಹಾಜರಪಡಿಸುತ್ತೇವೆ. ನಮ್ಮ ತಂದೆ ಮನೆ ಮತ್ತು ಅಂಗಡಿ ಕಟ್ಟಿಸಲು ಕೆಎಸ್ಎಫ್‌ಸಿ ಯಿಂದ ಸಾಲ ಪಡೆದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಕೆಎಸ್ಎಫ್‌ಸಿರವರು ಮನೆ ಕಟ್ಟಲು ಸಾಲ ಕೊಡುವುದಿಲ್ಲ, ಕೇವಲ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ನೀಡುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಕಟ್ಟಡ ಮತ್ತು ಫ್ಯಾಕ್ಟರಿಗಾಗಿ ಸಾಲ ಪಡೆದಿದ್ದೇವು ಎಂದು ನುಡಿಯುತ್ತಾರೆ. ಮನೆ ಕಟ್ಟಲು ಕೆಎಸ್ಎಫ್‌ಸಿ ಯಿಂದ ಸಾಲ ಪಡೆದಿಲ್ಲ ಎಂದರೆ ಸರಿ ಅಲ್ಲ. ನನ್ನ ಅಕ್ಕ ತಂಗಿಯರು ಸೇರಿ ಮನೆ ಕಟ್ಟಲು ಹಣ ನೀಡಿದ್ದಾರೆ ಎಂದರೆ ಸರಿ ಅಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಲಿಂಗಸಗೂರು ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯಲ್ಲಿ ನಾನು ಈ ದಾವೆಯ ವಾದಿಗೂ ಸಹ ದಾವಾ ಸ್ವತ್ತಿನಲ್ಲಿ ಭಾಗ ಇದೆ ಎಂದು ಹೇಳಿದ್ದರೂ ಸಹ ಈಗ ವಾದಿಗೆ ದಾವಾ ಸ್ವತ್ತಿನಲ್ಲಿ ಭಾಗ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಹೇಳಿ ದಾನಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ.

ನಿಪಿ-10 ರಲ್ಲಿ ನಮ್ಮ ತಂದೆ ದಾವಾ ಸ್ವತ್ತಿನಲ್ಲಿ ಎಲ್ಲ ಮಕ್ಕಳಿಗೆ ಭಾಗ ಇದೆ ಎಂದು ಬರೆದಿದ್ದಾರೆ ಎಂದರೆ, ಸಾಕ್ಷಿಯು ಅಸಲು ದಾವೆ ನಂ. 53/2008 ರಲ್ಲಿ ರಾಜಿ ಮಾಡಿಕೊಂಡು ವಾದಿ ತನ್ನ ಭಾಗದ ಬದಲಾಗಿ ಹಣ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ಯಾರಿಗೆ ಎಷ್ಟು ಭಾಗ ಕೊಟ್ಟಿದ್ದೇವೆ ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯಲ್ಲಿ ಸೆಟ್ಲಮೆಂಟ್ ಆಗಿದ್ದರಿಂದ ಬರೆಸಿಲ್ಲ ಎಂದು ನುಡಿಯುತ್ತಾರೆ. ಮನೆಯಲ್ಲಿ ಸೆಟ್ಲಮೆಂಟ್ ಆದ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಕೊಟ್ಟಿಲ್ಲ ಮತ್ತು ಹಣ ಸಹ ನೀಡಿಲ್ಲ ಹಾಗಾಗಿ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಭಾಗ ಇದೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿಯ ವಾದಿಯ ಭಾಗವವನ್ನು ಹೊಡೆಯಬೇಕು ಎನ್ನುವ ಉದ್ದೇಶದಿಂದ ಆಕೆಗೆ ಹಣ ನೀಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.